# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.29/2021

C.W.9
P.W. 9

ದಿನಾಂಕಃ 04-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಹಟ್ಟಿಗಯ್ಯ |
| ತಂದೆಯ ಹೆಸರು | ಃ ಬೇಟಯ್ಯ |
| ವಯಸ್ಸು | ಃ 55 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸ | ಃ ದೊಡ್ಡಸಾರಂಗಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-8 ನನ್ನ ತಂಗಿ, ಆಕೆಯ ಮಗಳು ಅಂಜಲಿ. ಅಂಜಲಿಗೆ ಹನುಮಂತರಾಯಪ್ಪ ಎಂಬುವರೊಂದಿಗೆ ಮದುವೆ ಮಾಡಿಕೊಟ್ಟಿದ್ದೇವು . ನಂತರ ಅವರು ಮಸ್ಕಕಲ್ ನಲ್ಲಿ ವಾಸ ಮಾಡಿಕೊಂಡಿದ್ದರು. ನನ್ನ ಅಳಿಯ ಕ್ಯಾನ್ಸರ್ ಕಾಯಿಲೆಯಿಂದ ಮದುವೆಯಾದ 5 ವರ್ಷಕ್ಕೆ ಮೃತಪಟ್ಟರು. ಅಂಜಲಿ ಮತ್ತು ಹನುಮಂತರಾಯಪ್ಪರವರಿಗೆ ಒಬ್ಬ ಗಂಡು ಮಗುವಿದ್ದು , ಸದರಿ ಮಗು ಮಸ್ಕಲ್ ನ ಅಜ್ಜಿಯ ಮನೆಯಲ್ಲಿ ಇರುತ್ತಾನೆ . ಅಂಜಲಿಗೆ ಅತ್ತೆ ಮನೆಯಲ್ಲಿ ಕಿರುಕುಳ ನೀಡಿದ ಕಾರಣ ಅಂಜಲಿ ಮತ್ತು ಮಗು ನಮ್ಮ ಮನೆಗೆ ಬಂದು ಸ್ವಲ್ಪ ದಿವಸ ವಾಸವಿದ್ದಳು. ನಂತರದಲ್ಲಿ ಅಂಜಲಿಯು ನಾನು ಏನಾದರೂ ಉದ್ಯೋಗ ಮಾಡಿಕೊಂಡು

ತುಮಕೂರಿನಲ್ಲಿ ಇರುತ್ತೇನೆಂದು ಹೇಳಿ ಮಗುವನ್ನು ಕರೆದುಕೊಂಡು ಹೋದಳು. ನಾನು ಒಂದು ದಿನ ಬಂದಾಗ ಅಂಜಲಿಯು ಸಂಜೆ ನಮ್ಮ ಮನೆಗೆ ಬರುತ್ತೇನೆಂದು ತಿಳಿಸಿದಳು. ಆದ ಕಾರಣ ಮಗುವನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೆ. ಆದರೆ ಆ ರಾತ್ರಿ ಅಂಜಲಿ ಮನೆಗೆ ಬರಲಿಲ್ಲ. ತುಮಕೂರಿನ ಡಿ ಎಂ ಪಾಳ್ಯದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದಳು. ಅಂಜಲಿ ಯಾವ ಕೆಲಸಕ್ಕೆ ಹೋಗುತ್ತಿದ್ದಳು ಎಂದು ನನಗೆ ಗೊತ್ತಿಲ್ಲ . ಅಂಜಲಿ ಬಾಡಿಗೆ ಇದ್ದ ಮನೆಯ ಮಾಲೀಕರ ಹೆಸರು ಶಿವಕುಮಾರ್ .

2) ಪೊಲೀಸರವರು ಚಾಸಾ-9 ರವರ ಹತ್ತಿರ ಅಂಜಲಿಯವರ ಕೊಲೆಯಾಗಿರುತ್ತದೆ ತುಮಕೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಆಕೆಯ ಶವವಿರುತ್ತದೆ ಎಂದುತಿಳಿಸಿದ ಮೇರೆಗೆ ಆ ಸಮಯದಲ್ಲಿ ನಾನು, ರಮೇಶ್ ,ದೇವರಾಜ್ , ಚಾಸಾ-9 , ಶಿವರಾಜ್ ಎಲ್ಲರೂ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತೇವೆ . ನಾನು ನೋಡುವಾಗ ನನ್ನ ಮಗಳ ಶವವು ಪೂರ್ತಿ ಕಪ್ಪಾಗಿತ್ತು. ಡಿ ಎಂ ಪಾಳ್ಯದಲ್ಲಿ ನಾನು ಜನರನ್ನು ಅಂಜಲಿಯ ಸಾವಿನ ಬಗ್ಗೆ ವಿಚಾರಿಸಿದಾಗ ತಮಗೆ ಗೊತ್ತಿಲ್ಲವೆಂದು ಹೇಳಿದರು.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆ ಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ.

ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

3) ದಿ 24-08-2020 ರಂದುಪೊಲೀಸರು ನಮ್ಮ ಊರಿಗೆ ಬಂದು ನನ್ನ ತಂಗಿಯ ಮಗಳ ಪೋಟೋ ತೋರಿಸಿ ಮೃತ ದೇಹವನ್ನು ತುಮಕೂರಿನ ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಇಟ್ಟಿರುವುದಾಗಿ ಹೇಳಿದ್ದು , ಆಗ ನಾನು ಪೋಟೋವನ್ನು ನೋಡಿ ತನ್ನ ತಂಗಿಯ ಮಗಳು ಎಂದು ಗುರುತಿಸಿದೆ. ಶವಗಾರದಲ್ಲಿ ನಾನು ನನ್ನ ತಂಗಿಯ ಮಗಳ ಶವವನ್ನು ನೋಡಿದಾಗ ತಲೆಯಿಂದ ಸೊಂಟದವರಿಗೆ ಕೊಳೆತು ಕೆಟ್ಟ ರಕ್ತ ಹೊರಬಂದು ದುರ್ವಾಸನೆ ಬರುತ್ತಿತ್ತು ಅಂದರೆ ಸರಿ. ನನ್ನ ತಂಗಿಯ ಮಗಳು ವಾಸವಾಗಿದ್ದ ಮನೆಯ ಮಾಲೀಕರ ಹೆಸರು ಉದಯ್ ಕುಮಾರ್ ಅಂದರೆ ಗೊತ್ತಿಲ್ಲ . ನಾನು ಅವರನ್ನು ವಿಚಾರಿಸಿದಾಗ ದಿ 21-08-20 ರಿಂದ ದಿ 23-08-2020 ರ ಅಂತರದಲ್ಲಿ ಅಂಜಲಿಯನ್ನು ಯಾರೋ ಅಪರಚಿತ ದುರ್ಷಮಿಗಳು ಆಕೆಯ ಮನೆಗೆ ಪ್ರವೇಶ ಮಾಡಿ ಯಾವುದೋ ಉದ್ದೇಶದಿಂದ ಯಾವುದೋ ಆಯುಧದಿಂದ ಅಥವಾ ಇನ್ನಾವುದೋ ರೀತಿಯಲ್ಲಿ ಆಕೆಯ ಕಾಲುಗಳನ್ನು ಸೀರೆಯಲ್ಲಿ ಕಟ್ಟಿ ಕೊಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಅಂದರೆ ಸರಿಯಲ್ಲ.

ಈ ವಿಚಾರವನ್ನು ನಾನು ಪೊಲೀಸರಿ ಗೆ ಹೇಳಿ ಆರೋಪಿಗಳನ್ನು ಪತ್ತೆ ಮಾಡುವಂತೆ ಹೇಳಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು **1** ಮತ್ತು **4** ನೆ ಆರೋಪಿಯ ಪರ ಶ್ರೀ ಬಿ ಕೆ ಪಿ ಎಸ್ ವಕೀಲರಿಂದ</u>ಃ

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಅಂದರೆ ಸರಿ. ನನ್ನಮಗಳ ಗಂಡ ತೀರಿಕೊಂಡ ನಂತರ ನಾವು ನಮ್ಮ ಮಗಳಿಗೆ ನಮ್ಮ ಊರಿನಲ್ಲಿ ಬಂದು ಆದರೂ ಇರು ಅಥವಾ ಗಂಡನ ಮನೆಯಲ್ಲಿ ವಾಸಮಾಡಿಕೊಂಡು ಇರು ಎಂದು ಬುದ್ದಿವಾದ ಹೇಳಿದೆವು ಅಂದರೆ ಸರಿ. ಆದರೂ ಸಹ ನನ್ನ ಮಗಳು ಬುದ್ದಿ ಮಾತನ್ನು ಆಗಲಿ ಮತ್ತು ತನ್ನ ಅತ್ತೆ , ಮಾವನ ಬುದ್ದಿ ಮಾತನ್ನು ಕೇಳಲಿಲ್ಲ ಅಂದರೆ ಸರಿ. ಆಕೆಯ ಮಗುವನ್ನು ನನ್ನ ಬಳಿ ಬಿಟ್ಟು , ಮನೆ ಬಿಟ್ಟು ಹೋಗಲು ಶುರು ಮಾಡಿದಳು ಅಂದರೆ ಸರಿ. ಆಕೆ ಎಲ್ಲಿ ಹೋಗುತ್ತಾಳೆ ,ಬರುತ್ತಾಳೆಂದು ನಾನು ನೋಡುತ್ತಿರಲಿಲ್ಲ ಅಂದರೆ ಸರಿ. ನನ್ನ ಮಗಳು ಡಿ ಎಂ ಪಾಳ್ಯದಲ್ಲಿ ಬಾಡಿಗೆಗೆ ಇದ್ದ ಬಗ್ಗೆ ಬಾಡಿಗೆ ಕರಾರು ಪತ್ರ ಮಾಡಿಕೊಂಡಿದ್ದಾಳೋ ಇಲ್ಲವೋ ನನಗೆ ಗೊತ್ತಿಲ್ಲ .ನನ್ನ ಮಗಳು ಮನೆ ಬಿಟ್ಟು ಬಂದ ನಂತರ ಯಾವ ರೀತಿ ಜೀವನ ಮಾಡುತ್ತಿದ್ದಳೋ ನನಗೆ ಗೊತ್ತಿಲ್ಲ ಅಂದರೆ ಸರಿ. ನನ್ನ ಮಗಳು ಯಾರ ಜೊತೆ ಜಗಳ ಮಾಡಿಕೊಳ್ಳುತ್ತಿದ್ದಳೋ ನನಗೆ ಗೊತ್ತಿಲ್ಲ ಅಂದರೆ ಸರಿ. ಚಾಸಾ-9 ರವರು ನನ್ನ ಮಗಳ ಶವ ಜಿಲ್ಲಾ ಆಸ್ಪತ್ರೆಯಲ್ಲಿ ಇರುವ ವಿಷಯ ಗೊತ್ತಾಯಿತು. ನಂತರ ಶವ ಪರೀಕ್ಷೆಯ ನಂತರ ನಾವು ನಮ್ಮ ಮನೆಯ ಪದ್ದತಿಯ ಪ್ರಕಾರ ಶವವನ್ನು ದಫನ್ ಮಾಡಿದೆವು ಅಂದರೆ ಸರಿ. ಇಲ್ಲಿಯವರಿಗೂ ನಾನು ನನ್ನ ಮಗಳ ಸಾವಿಗೆ ಕಾರಣ ಎನು ಎಂದು ತಿಳಿದುಕೊಂಡಿಲ್ಲ ಅಂದರೆ ಸರಿ . ಪೊಲೀಸರು ನನ್ನ ಹೇಳಿಕೆಯಲ್ಲಿ ಏನು

ಬರೆದುಕೊಂಡರು ಎಂಬ ವಿಚಾರ ನನಗೆ ಗೊತ್ತಿಲ್ಲ ಅಂದರೆ ಸರಿ.

2 ರಿಂದ 5 ನೇ ಆರೋಪಿ ಪರ ವಕೀಲರು 1 ಮತ್ತು 4 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಳ್ಳಲು ಕೋರಿರುತ್ತಾರೆ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು